ಸರ್ಕಾರದಲ್ಲಿ ಏನಾಗಿದೆ ಎಂದು ಎಲ್ಲರೂ....

ಶ್ರೀ ಜೆ.ಹೆಚ್.ಪಟೀಲ್: ಅದು ಅನಾವಶ್ಯಕ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈಗ ಕೇಂದ್ರ ಸರ್ಕಾರದಲ್ಲಿ ಏನಾಗಿದೆ ಅಂದರೆ....

ಶ್ರೀ ಜೆ.ಹೆಚ್.ಪಟೀಲ್: ಈಗ ತಕ್ಷಣ ನೀವು ಔಷಧಿ ಕೊಡುತ್ತೀರಾ ಎಂದು ಇದ್ದಾಗ, ನೀವು ಈಗ ಆಸ್ಪತ್ರೆಗೆ ದಾಖಲು ಮಾಡು, ಡಾಕ್ಟರ್ ಬಂದು ನೋಡಿಕೊಳ್ಳಲಿ, ಅದೆಲ್ಲಾ ಬೇಡ, ಈಗ ತಕ್ಷಣಕ್ಕೆ ಏನು ಬೇಕೋ ಅದನ್ನು ನಿಮಗೆ....

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ನಿಮಗೆ ಸಲಹೆ ಕೊಡುತ್ತಿದ್ದೇವೆ.

ಶ್ರೀ ಜೆ.ಹೆಚ್.ಪಟೀಲ್: ಉತ್ತರ ಹೇಳಿದ್ದೇನಲ್ಲಾ. ಸನ್ಮಾನ್ಯ ಉಪಾಧ್ಯಕ್ಷರೆ, ಈ ಸಧ್ಯಕ್ಕೆ ಬೇಕಾದರೆ ಈ ವಿಷಯವನ್ನು ಮುಂದಕ್ಕೆ ಹಾಕೋಣ.

ಉಪಾಧ್ಯಕ್ಷರು: ಈಗ ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1997ನೇ ಸಾಲಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಿಗಳ, ವಿಶ್ವವಿದ್ಯಾನಿಲಯದ ತಿದ್ದುಪಡಿ ಇದನ್ನು ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಮಂಡಿಸುತ್ತಾರೆ.

(ಎ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ (ತಿದ್ದುಪಡಿ) ವಿಧೇಯಕ 1997

ಡಾ॥ ಎಂ.ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿರಸ್ಕೃತವಾದ 1997ನೇ ಸಾಲಿನ ರಾಜೀವ್ ಗಾಂದಿ ಆರೋಗ್ಯ ವಿಜ್ಞಾನಗಳ, ವಿಶ್ವವಿದ್ಯಾನಿಲಯದ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರಿಶೀಲಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಈಗ ಇದರ ಬಗ್ಗೆ ಪರ್ಯಾಲೋಚನ ಪ್ರಸ್ತಾವವನ್ನು ಈಗ ಸಭೆಯ....

ಶ್ರೀ ಎಸ್.ಸುರೇಶ್ ಕುಮಾರ್: ಸನ್ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಚರ್ಚೆನೇ ಇಲ್ಲ ಎಂದು ಹೇಳುತ್ತಾರಲ್ಲಾ,

ಉಪಾಧ್ಯಕ್ಷರು: ನೀವು ಪಾಸ್ ಮಾಡಿ ಕಳುಹಿಸಿದ್ದು ಪುನಃ ಅಲ್ಲಿಂದ ವಾಪಸ್ಸು ಬಂದಿದೆ.

(ಗೊಂದಲ)

ಶ್ರೀ ಎಸ್.ಸುರೇಶ್ ಕುಮಾರ್: ಇಲ್ಲಿ ನಾವು ಅಪೋಸ್ ಮಾಡಿದ್ದೆವು. ಆದರೆ ನೀವು ನಮಗೆ ಹೇಳಲು ಬಿಟ್ಟಿರಲಿಲ್ಲ, ಈಗ ಬಿಡಿ ಎಂದು ಕೇಳಿದ್ದು. ಏತಕ್ಕೆ ನಾವು ವಿರೋಧಿಸುತ್ತೇವೆ ಎಂದು.

ಶ್ರೀ ಕೆ.ಎಸ್.ಈಶ್ವರಪ್ಪ: ಅಂಗೀಕಾರವಾಗಿ ವಾಪಸ್ಸು ಬರಲಿಲ್ಲ, ತಿರಸ್ಕಾರವಾಗಿ ವಾಪಸ್ಸು ಬಂದಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಮಾತನಾಡುವುದಕ್ಕೆ ಬಿಡಿ. ಏಕೆ ಅಪೋಸ್ ಮಾಡಿದೆವು ಎಂಬುದನ್ನು ಹೇಳುತ್ತೇವೆ. ಅವತ್ತು ನಮಗೆ ಅವಕಾಶ ಸಿಗಲಿಲ್ಲ ಎಲ್ಲರಿಗೂ, ದೊಡ್ಡ ಗಲಾಟೆ ಆಯಿತು. ಅವತ್ತು ನಾವೆಲ್ಲಾ ವಿರೋಧ ವ್ಯಕ್ತಪಡಿಸಿದ್ದೇವೆ.

ಮಾನ್ಯ ಸದಸ್ಯರು: ಒಪ್ಪಿಗೆ ಕೊಡಲಿಲ್ಲ, ವಿರೋಧಿಸಿದ್ದೆವು.

ಉಪಾಧ್ಯಕ್ಷರು: ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರಲ್ಲಾ, ಏನು ಮಾಡುವುದು?

ಪರ್ಯಾಲೋಚನಾ ಪ್ರಸ್ತಾವ

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, 1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಈ ವಿಧೇಯಕವನ್ನು ಈ ಸಭೆ ಅಂಗೀಕರಿಸಿದೆ. ಈ ವಿಧೇಯಕವನ್ನು ವಿಧಾನ ಪರಿಷತ್ತಿನಲ್ಲಿ ತಿರಸ್ಕೃತ ಮಾಡಿದ್ದರಿಂದ ಪುನಃ ಈ ಸಭೆಯಲ್ಲಿ ಮಂಡಿಸಲಾಗಿದೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ ದೀರ್ಘಶೀರ್ಷಿಕೆ ಪ್ರಸ್ತಾವನೆ, ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ''1997ರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ''1997ರ ರಾಜೀವ್‌ಗಾಂಧಿ, ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಐ) ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕ, 1997.

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಉಪಾಧ್ಯಕ್ಷರೇ, 1997ನೇ ಸಾಲಿನ ಸಹಕಾರ ಸಂಘಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ